## ಚುಟುಕು ಸುದ್ದಿ

### ಕರಿಕಲ್ಲಮ್ಮನ ಜಾತ್ರೋತ್ಸವ



**ನವಲಗುಂದ:** ರೈತರ ರಕ್ಷಣೆಯಾಗಿ ತಾಯಿ ಕರಿ ಕಲ್ಲಮ್ಮ ದೇವಿಯು ನಮ್ಮೆಲ್ಲ ರೈತರ ಬದುಕನ್ನು ಹೆಚ್ಚು ಹಸಿರು ಮಾಡಲೆಂದು ಪ್ರತಿ ವರ್ಷವೂ ಮುಂಗಾರು ಬಿತ್ತನೆ ಪೂರ್ವದಲ್ಲಿಯೇ ಕರಿ ಕಲ್ಲಮ್ಮನ ಜಾತ್ರೆ ಹಾಗೂ ಉಡಿ ತುಂಬುವ ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಜರುಗಿಸುತ್ತಾ ಬಂದಿದ್ದೇವೆ ಎಂದು ಮಾಜಿ ಸಚಿವ ಕೆ ಎನ್ ಗಡ್ಡಿ ಹೇಳಿದರು.

ಪಟ್ಟಣದಿಂದ ಇಬ್ರಾಹಿಂಪುರ ರಸ್ತೆಯಿಂದ ಅಡ್ನೂರ್ ರಸ್ತೆಗೆ ಹೊಂದಿರುವ ಕರಿ ಕಲ್ಲಮ್ಮ ದೇವರ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು.

ರೈತರು ಪ್ರತಿ ವರ್ಷದಂತೆ ಈ ವರ್ಷವೂ ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ದೇವಿಗೆ ಉಡಿ ತುಂಬಿ ಕೃಪೆಗೆ ಪಾತ್ರರಾದರು. ಈ ವೇಳೆ ಮಾಜಿ ಪುರಸಭಾ ಅಧ್ಯಕ?ರಾದ ಅಪ್ಪಣ್ಣ ಹಳ್ಳದ, ಬಸವರಾಜ ಬಸೆಗೊಣ್ಣವರ, ಶಿವಾನಂದ ತಡಸಿ, ಶ್ರೀಕಾಂತ ಮನ್ನಾಚಾರ್ಯ, ಬಸವರಾಜ ಶಿದ್ರಾಮಶೆಟ್ಟರ, ರಾಮನಗೌಡ ಬೆಳವಟಗಿ, ಆನಂದ ಹೆಬಸೂರ, ರವೀಂದ್ರ ವಿಶ್ವಜ್ಞ, ಈರಣ್ಣ ಸಿಡಗಂಟಿ, ಬಸವರಾಜ ಮುಧೋಳ, ಅನ್ನಪೂರ್ಣ ಗಡ್ಡಿ, ನಾಶಿಪುಡಿ, ಶಂಭು ಸಿದ್ದಾಪೂರ, ಕೊಪ್ಪಳ, ಸಿದ್ದಪ್ಪ ಬಳ್ಳೋಳ್ಳಿ, ಈರಣ್ಣ ಹಡಪದ ಸೇರಿದಂತೆ ನೂರಾರು ಭಕ್ತರು ಭಾಗಿಯಾಗಿದ್ದರು.

### ಸಚಿವ ಜೋಶಿಯಿಂದ ಪೊಲೀಸ್ ಅಧಿಕಾರಿಗಳ ತೀವ್ರ ತರಾಟೆಗೆ



**ಧಾರವಾಡ:** ತಡಸಿನಕೊಪ್ಪದ ಬಳಿ ನಡೆದ ಫೈರಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಪೊಲೀಸ್ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಫೈರಿಂಗ್ ಪ್ರಕರಣದಲ್ಲಿ ಗಾಯಗೊಂಡ ವಿಠಲ ವಾಲೀಕಾರನ ಆರೋಗ್ಯ ವಿಚಾರಿಸಲು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಎಸ್‌ಡಿಎಂ ಆಸ್ಪತ್ರೆಗೆ ಬಂದರೂ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಬಂದಿರಲಿಲ್ಲ.

ಫೈರಿಂಗ್ ಪ್ರಕರಣ ನಡೆದು ನಾಲ್ಕು ದಿನಗಳಾದರೂ ಮುಖ್ಯ ಆರೋಪಿಯನ್ನು ಪೊಲೀಸರು ಬಂಧಿಸದೇ ಇರುವುದು ಜೋಶಿ ಅವರ ಆಕ್ರೋಶಕ್ಕೆ ಕಾರಣವಾಯಿತು. ಈ ಎಲ್ಲ ವಿಚಾರಗಳನ್ನು ಇಟ್ಟುಕೊಂಡು ಸ್ಥಳದಲ್ಲಿದ್ದ ಇನ್‌ಸ್ಪೆಕ್ಟರ್ ದಯಾನಂದ ಹಾಗೂ ಡಿಸಿಪಿ ಶ್ರುತಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ನಿಮ್ಮ ಕಮಿಷನರ್ ಎಲ್ಲಿದ್ದಾರೆ? ಈ ಪ್ರಕರಣದಲ್ಲಿ ಪೊಲೀಸರು ಭಾಗಿಯಾಗಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ತಾಂತ್ರಿಕ ಬಲದಿಂದ ಜಗತ್ತನ್ನು ಮುನ್ನಡೆಸಲಿದೆ ಭಾರತ

## ಎನ್‌ಡಿಐಎನ್ ಮಾಹಿತಿ ತಂತ್ರಜ್ಞಾನ 8ನೇ ಘಟಿಕೋತ್ಸವ 2026ರಲ್ಲಿ ಕೇಂದ್ರ ಸಚಿವ ಜೋಶಿ

ಉದಯಕಾಲ ನ್ಯೂಸ್

**ಧಾರವಾಡ:** ದೇಶವು ಈಗಾಗಲೇ ಬಾಹ್ಯಾಕಾಶ ಮತ್ತು ಲಸಿಕೆಗಳಂತಹ ಬಹು ಕ್ಷೇತ್ರಗಳಲ್ಲಿ ತನ್ನ ತಾಂತ್ರಿಕ ಪ್ರಕ್ರಿಯೆಯನ್ನು ಪ್ರದರ್ಶಿಸಿದೆ ಮತ್ತು ಈ ಪರಂಪರೆಯನ್ನು ಮುಂದುವರಿಸುವುದು ಈಗ ಹೊಸ ಪದವೀಧರರ ಮೇಲಿದೆ ಹಾಗು ಮುಂದಿನ ದಿನಗಳಲ್ಲಿ ಭಾರತವು ತನ್ನ ತಾಂತ್ರಿಕ ಬಲದಿಂದ ಭಾರತವು ಜಗತ್ತನ್ನು ಮುನ್ನಡೆಸಲಿದೆ ಎಂದು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳ ಕೇಂದ್ರ ಸಚಿವ ಶ್ರೀ ಪ್ರಹ್ಲಾದ್ ಜೋಶಿ ಹೇಳಿದರು.

ಐಐಐಟಿ ಧಾರವಾಡ ತನ್ನ 8ನೇ ಘಟಿಕೋತ್ಸವವನ್ನು ಮೇ 30 ರಂದು ನಡೆಸಿತು. ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಕೇಂದ್ರ ಸಚಿವ ಶ್ರೀ ಪ್ರಹ್ಲಾದ್ ಜೋಶಿ ಅವರು ಪ್ರತಿಷ್ಠಿತ ಸಂಸ್ಥೆಯಿಂದ ಪದವಿ ಪಡೆದಿದ್ದಕ್ಕಾಗಿ ಪದವಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡುವ ಜವಾಬ್ದಾರಿಯನ್ನು ಅವರು ನೆನಪಿಸಿದರು. ದೇಶದಲ್ಲಿ ಲಭ್ಯವಿರುವ ತಾಂತ್ರಿಕ ಪ್ರತಿಭೆಗಳ ಸಮೂಹ ಮತ್ತು ಐಐಐಟಿ ಧಾರವಾಡದಂತಹ ಸಂಸ್ಥೆಗಳ ಅತ್ಯುತ್ತಮ ಆರೈಕೆಯೊಂದಿಗೆ, 2047 ರಲ್ಲಿ ನಾವು ಖಂಡಿತವಾಗಿಯೂ ವಿಕಾಸ್ ಭಾರತ್ ಆಗುತ್ತೇವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.




ಘಟಿಕೋತ್ಸವದ ಗೌರವಾನ್ವಿತ ಅತಿಥಿ ಪ್ರೊ. ರಂಗನ್ ಬ್ಯಾನರ್ಜಿ ಅವರು ಘಟಿಕೋತ್ಸವ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ, ಬ್ಯಾಂಕ್ ವಹಿವಾಟುಗಳು, ಟಿಕೆಟ್ ಬುಕಿಂಗ್, ಶಾಪಿಂಗ್ ಮುಂತಾದ ಚಟುವಟಿಕೆಗಳನ್ನು ವಿದ್ಯಾರ್ಥಿಯಾಗಿದ್ದಾಗಿನ ಇಂದಿನ ಚಟುವಟಿಕೆಗಳಿಗೆ ಹೋಲಿಸುವ ಮೂಲಕ ಕಳೆದ ಕೆಲವು ದಶಕಗಳಲ್ಲಿ ಭಾರತದಲ್ಲಿ ಆಗಿರುವ ಗಮನಾರ್ಹ ತಾಂತ್ರಿಕ ಪ್ರಗತಿಯತ್ತ ಗಮನ ಸೆಳೆಯಲು ಪ್ರಯತ್ನಿಸಿದರು. ಈ ಪ್ರಗತಿ ನಮ್ಮ ಯುವಕರ ಬೌದ್ಧಿಕ ಸಾಮರ್ಥ್ಯಗಳಿಂದ ಸಾಧ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು ಮತ್ತು ಯುವ ಪದವೀಧರರು ದೇಶದ ಬೆಳವಣಿಗೆಗೆ ಅನುಗುಣವಾಗಿ ತಮ್ಮ ವೃತ್ತಿಜೀವನವನ್ನು ಯೋಜಿಸಬೇಕೆಂದು ಒತ್ತಾಯಿಸಿದರು.

ಐಐಐಟಿ ಧಾರವಾಡದ ಆಡಳಿತ ಮಂಡಳಿಯ ಅಧ್ಯಕ್ಷ, ಖ್ಯಾತ ಕೈಗಾರಿಕೋದ್ಯಮಿ ಆಶ್ರೀ ಜಲಜ್ ದಾನಿ ಅವರು ತಮ್ಮ ಹೇಳಿಕೆಗಳಲ್ಲಿ ಪದವೀಧರರಿಗೆ ಅವರು ಜಗತ್ತಿಗೆ ಕಾಲಿಡುತ್ತಿದ್ದಾರೆ ಮತ್ತು ಅವರ ಪ್ರಯತ್ನಗಳ ಮೂಲಕ ಇತಿಹಾಸ ನಿರ್ಮಿಸುವ ನಿರೀಕ್ಷೆಯಿದೆ ಎಂದು ಸೂಚಿಸಿದರು. ಆದ್ದರಿಂದ ಯುವ ಮನಸ್ಸುಗಳು ಕಷ್ಟಪಟ್ಟು ಕೆಲಸ ಮಾಡಬೇಕು ಮತ್ತು ಯಶಸ್ವಿಯಾಗುವ ವಿಶ್ವಾಸ ಹೊಂದಿರಬೇಕು ಎಂದು ಅವರು ಹೇಳಿದರು.

ವೇದಿಕೆಯಲ್ಲಿ ಆಡಳಿತ ಮಂಡಳಿ ಮತ್ತು ಸೆನೆಟ್ ಸದಸ್ಯರೊಂದಿಗೆ ಹಾಜರಿದ್ದ ಸಂಸ್ಥೆಯ ನಿರ್ದೇಶಕ ಪ್ರೊ. ಮಹಾದೇವ್ ಪ್ರಸನ್ನ, ಸಂಸ್ಥೆಯ ಬಗ್ಗೆ ಸಮಗ್ರ ವರದಿಯನ್ನು ಮಂಡಿಸಿದರು. ಲಗತ್ತಿಸಲಾದ ವಿವರಗಳ ಪ್ರಕಾರ ಸುಮಾರು 255 ಪದವೀಧರರು ಪದವಿಗಳನ್ನು ಪಡೆದರು ಮತ್ತು ಆರು ವಿದ್ಯಾರ್ಥಿಗಳು ಪದಕಗಳನ್ನು ಪಡೆದರು. ನಿರ್ದೇಶಕರು ಮತ್ತು ಇತರ ಗಣ್ಯರು ಪದವಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

# ಮತದಾರರ ತೀವ್ರ ಪರಿಷ್ಕರಣೆಯಿಂದ ಮತದಾನದ ಹಕ್ಕು ಕಡಿತ: ಕಸ್ತೂರಿ ಹಳ್ಳದ

ಉದಯಕಾಲ ನ್ಯೂಸ್

**ನವಲಗುಂದ:** ಎಸ್‌ಐಆರ್ ನೆಪದಲ್ಲಿ ದೇಶವ್ಯಾಪಿ ಕೋಟ್ಯಂತರ ಅಮಾಯಕ ಜನರ ಮತದಾನದ ಹಕ್ಕನ್ನು ಕಸಿಯಲು ಕೇಂದ್ರ ಚುನಾವಣಾ ಆಯೋಗ ಹೊರಟಿದೆ ಎಂದು ಮಹಿಳಾ ಸಾಂತ್ವನ ಕೇಂದ್ರದ ಅಧ್ಯಕ್ಷೆ ಕಸ್ತೂರಿ ಹಳ್ಳದ ಅಭಿಪ್ರಾಯ ವ್ಯಕ್ತಪಡಿಸಿದರು.

ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳ ಜನಪರ ಸಂಘಟನೆಗಳ ಒಕ್ಕೂಟದ ತಾಲ್ಲೂಕು ಘಟಕದಿಂದ ತಹಶೀಲ್ದಾರ ಸುಧೀರ ಸಾಹುಕಾರ ಅವರ ಮೂಲಕ ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿ ನೀಡಿ ಮಾತನಾಡಿದ ಅವರು ಈಗಾಗಲೇ 13 ರಾಜ್ಯಗಳಲ್ಲಿ ಎಸ್.ಐ.ಆರ್ ಪರಿಷ್ಕರಣೆ ನಡೆಸಿ 6.5 ಕೋಟಿ ಜನರನ್ನು ಮತದಾರರ ಪಟ್ಟಿಯಿಂದ ಹೊರ ಹಾಕಲಾಗಿದ್ದು ಈ ಕೂಡಲೇ ಕರ್ನಾಟಕದಲ್ಲಿ ಈ ಪ್ರಕ್ರಿಯೆ ಸ್ಥಗಿತಗೊಳಿಸಿ ಜನಸ್ನೇಹಿ ಎಸ್.ಐ.ಆರ್ ಪ್ರಕ್ರಿಯೆ ಆರಂಭಿಸಬೇಕೆಂದು ಆಗ್ರಹ ಮಾಡಿದರು.

ಮಹಿಳಾ ಸಾಂತ್ವನ ಕೇಂದ್ರದ ಕಾರ್ಯಕರ್ತೆ ಸವಿತಾ ಸರನಾಡಗೌಡರ ಮಾತನಾಡಿ ಸದ್ಯ ನಡೆಯಿತ್ತಿರುವಂತಹ ಎಸ್.ಐ.ಆರ್ ಪ್ರಕ್ರಿಯೆಗೆ ನಮ್ಮದು ಯಾವುದೇ ರೀತಿಯ



ವಿರೋಧವಿಲ್ಲ, ಮತದಾರರ ತೀವ್ರ ಪರಿಷ್ಕರಣೆ ವೇಳೆ ಜನರನ್ನೆಲ್ಲಾ ಆರೋಪಿಗಳಂತೆ ಕಾಣುವ, ಅಮಾಯ ಜನರನ್ನು ಪರದಾಡುವಂತೆ ಮಾಡುವ ಮೂಲಕ ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕುವ ಕೆಲಸ ಜನ ವಿರೋಧಿಯ ಕೆಲಸವಾಗಿದೆ ಎಂದರು.

ಮಹಿಳಾ ಸಾಂತ್ವನ ಕೇಂದ್ರದ ಕಾರ್ಯಕರ್ತೆ ಕಾವೇರಿ ಗುಡಿಸಾಗರ ಮಾತನಾಡಿದರು.

ಸಾಮಾಜಿಕ ಕಾರ್ಯಕರ್ತೆ ಗಿರಿಜಾ ಹೂಗಾರ ಮಾತನಾಡಿ ಕಾಗದದ ಗದ್ದಲಗಳಲ್ಲಿ ಇದುವರೆಗೆ ಅತಿಹೆಚ್ಚು ಡಿಲೀಟ್ ಆಗಿರುವವರು ವಿವಾಹಿತ ಮಹಿಳೆಯರು, ಅಲೆಮಾರಿ ಅದಿವಾಸಿ ದಲಿತ ಸಮುದಾಯಗಳ, ಗ್ರಾಮೀಣ ಭಾಗದ ಬಡವರು ಹಾಗೂ ಅಲ್ಪಸಂಖ್ಯಾತರು, ಈ ಎಸ್.ಐ.ಆರ್ ನ

ಅಸಲಿ ಉದ್ದೇಶ ನುಸುಳುಕೋರರನ್ನು ಪತ್ತೆಹಚ್ಚುವುದಲ್ಲ, ಅದು ಚುನಾವಣಾ ಆಯೋಗದ ಕೆಲಸವೂ ಅಲ್ಲ. ಇಲ್ಲಿ ಅಸಲಿ ಉದ್ದೇಶ ಬೇರೆಯದ್ದೇ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಶ್ರುತಿ ಬೆಂಡಿಗೇರಿ, ಮಾಬುಸಾಬ ಯರಗುಪ್ಪಿ, ಮಲ್ಲಿಕಾರ್ಜುನಸ್ವಾಮಿ ಮಠಪತಿ, ಶಿವಲಿಂಗಯ್ಯ ಹಿರೇಮಠ, ಬಸವರಾಜ ಮಲ್ಲದಾಸರ ಉಪಸ್ಥಿತರಿದ್ದರು.

# ಹೆಣ್ಣುಮಕ್ಕಳ ಸಾಹಿತ್ಯ ಅಡುಗೆ ಮನೆಗೆ ಮೀಸಲಲ್ಲ: ಡಾ. ರಾಜೂರ

## ಉ.ಕ. ಲೇಖಕಿಯರ ಸಂಘದ ಹಿರಿಯಕ್ಕನ ಅಕ್ಷರ ಸಂಭ್ರಮ

ಉದಯಕಾಲ ನ್ಯೂಸ್

**ಧಾರವಾಡ:** ಉತ್ತರ ಕರ್ನಾಟಕ ಲೇಖಕಿಯರ ಸಂಘದ ಹಿರಿಯಕ್ಕನ ಅಕ್ಷರ ಸಂಭ್ರಮ ಮಾಲಿಕೆಯ ಎರಡನೇ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ. ಮಾಲತಿ ಪಟ್ಟಣಶೆಟ್ಟಿ ಯವರ ಸಾಹಿತ್ಯದ ಚಿಂತನ ಮಂಥನ ನಡೆಯಿತು.

ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಡಾ. ವೀರಣ್ಣ ರಾಜೂರ ಹೊಸ ಬಗೆಯ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾಲತಿ ಅಕ್ಕನವರ ಕಾವ್ಯ ಸಾಹಿತ್ಯದ ವಿಮರ್ಶೆ ಮಾಡಿದ ಕಾಸರಗೋಡಿನ ಸುಭಾಸ ಪಟ್ಟಾಜೆಯವರು ನವ್ಯ ಕಾವ್ಯಗಳಿಂದ ಪ್ರಚೋದನೆಗೊಂಡ ಅನುಭವದ ಹಿನ್ನೆಲೆಯಲ್ಲಿ ರೂಪಗೊಂಡ ಹೊಸ ಪ್ರಯೋಗಗಳು, ಸಮಾಜ ಕತೆಗೆ ತೆರೆದುಕೊಂಡ ಹೆಣ್ಣುಮಕ್ಕಳ ಸಾಹಿತ್ಯ ಅಡುಗೆ ಮನೆಗೆ ಮೀಸಲ್ಲ ಎಂಬುದನ್ನು ಪ್ರತಿಪಾದಿಸುವ ಕಾವ್ಯ ಸಾಹಿತ್ಯ ಇವರದೆಂದರು.

ಅಕ್ಕನ ಕಥಾ ಸಾಹಿತ್ಯಕ್ಕೆ ಕನ್ನಡಿ ಹಿಡಿದ ವಿಕಾಸ ಹೊಸಮನಿಯವರು ಇವರ ಸಾಹಿತ್ಯ ಗಂಡು ಹೆಣ್ಣಿನ ಸಂಬಂಧದ ಸಂಕೀರ್ಣತೆಯ ಪುನರಾವರ್ತನೆ,




ಕುಟುಂಬ ವಿಂಗಡನೆಗಳ ಕಾರಣ ಹುಡುಕುತ್ತ ಕಠೋರ ವಾಸ್ತವತೆ ಪ್ರತಿಪಾದಿಸುತಾರೆ. ಮುಂದೆ ಸಂದರ್ಶನ ಸಂಪುಟಗಳನ್ನು ತರಬೇಕಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು.

ಅನಿತಾ ಗುಡಿಯವರ ಆಶಯ ನುಡಿಯಲ್ಲಿ, ಅಕ್ಕನದು ಸ್ತ್ರೀಪರ ಸಾಹಿತ್ಯ, ಮಾತೃತ್ವ ಮೂಲ ದ್ರವ್ಯ ಎಂದರೆ, ಅಧ್ಯಕ್ಷೆ, ರೂಪಾ ಜೋಶಿ ಪ್ರಾಸ್ತಾವಿಕ ಮಾತಿನಲ್ಲಿ ಅವಗಣನೆಗೆ ಒಳಗಾದ ನಮ್ಮನ್ನು ನಾವೇ ಗುರುತಿಸಿಕೊಳ್ಳೋಣ ವೆಂದರು.

ಕಾರ್ಯಕ್ರಮಕ್ಕೆ ವೀಣಾ ಶಾಂತೇಶ್ವರ, ರಾಜೇಶ್ವರಿ ಮಹೇಶ್ವರಯ್ಯ, ಆನಂದ ಪಾಟೀಲ, ಲಿಂಗರಾಜ ಅಂಗಡಿ ಉಪಸ್ಥಿತರಿದ್ದರು. ಮಾಲತಿಯವರೊಂದಿಗೆ ಸಂವಾದದೊಂದಿಗೆ ಕಾರ್ಯಕ್ರಮ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿನುತಾ ಹಂಚಿನಮನಿ ವಂದನಾರ್ಪಣೆ ಮಾಡಿದರು.

# ಗ್ರಂಥಾಲಯ ಓದುಗರಿಂದ ಬೆಳೆಯಲಿ: ಸಾಹಿತಿ ಡಾ. ಪಟ್ಟಣಶೆಟ್ಟಿ

## ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ ಉದ್ಘಾಟನೆ



ಉದಯಕಾಲ ನ್ಯೂಸ್

**ಧಾರವಾಡ:** ಮನುಷ್ಯನ ಬುದ್ಧಿ ವಿಕಸನಕ್ಕೆ ಓದು ಅತ್ಯವಶ್ಯಕ. ಗ್ರಂಥಾಲಯಗಳು ಹೆಚ್ಚೆಚ್ಚು ಬೆಳೆಯಬೇಕು ಮತ್ತು ಗುಂಪು ಚರ್ಚೆಗಳ ಮೂಲಕ ವಿಷಯ ವಿನಿಮಯ ಮಾಡಿಕೊಳ್ಳುವುದರಿಂದ ಬುದ್ಧಿಮಟ್ಟ ಹೆಚ್ಚುತ್ತದೆ, ಎಂದು ಖ್ಯಾತ ಸಾಹಿತಿ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಹಾಗೂ ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಧಾರವಾಡ ಇವುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭವನ್ನು ಡಾ ವೀಣಾ ಬಿರಾದಾರ ಮನೆಯಲ್ಲಿ ಉದ್ಘಾಟಿಸಿ ಮಾತನಾಡಿದರು.

ಸ್ವಾಗತಿಸಿ ಮಾತನಾಡಿದ ಡಾ. ವೀಣಾ ಬಿರಾದಾರ್, ಕನ್ನಡಪುಸ್ತಕಪ್ರಾಧಿಕಾರದಅಧ್ಯಕ್ಷಡಾ.ಮಾನಸಾಅವರ ಕನಸಿನ ಕೂಸಾದ ಈ 'ಮನೆಗೊಂದು ಗ್ರಂಥಾಲಯ' ಯೋಜನೆಯ ಈ ವಿಶಿಷ್ಟ ಕಾರ್ಯಕ್ರಮವು ನಮ್ಮ ಮನೆಯಲ್ಲಿ ನಡೆಯುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಪುಸ್ತಕಗಳನ್ನು ಮನೆ ಮನೆಗೆ ತಲುಪಿಸಿ, ಓದುವ ಆಸಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಂಥ ಕಾರ್ಯಕ್ರಮ ಅತ್ಯುಪಯುಕ್ತ ಎಂದು ಸಂತಸ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಧಾರವಾಡದ ಅಧ್ಯಕ್ಷರಾದ ಡಾ. ಲಿಂಗರಾಜ ಅಂಗಡಿ ಅವರು ಮಾತನಾಡಿ, ''ಇಂತಹ ಸಾರಸ್ವತ ಕಾರ್ಯಕ್ರಮಗಳು ಸಮಾಜದಲ್ಲಿ ಓದಿನ ಸಂಸ್ಕೃತಿಯನ್ನು ಬೆಳೆಸಲು ಪೂರಕವಾಗಿವೆ . ಇವತ್ತು ಧಾರವಾಡದಲ್ಲಿ 7 ಮನೆಗಳಲ್ಲಿ ಗ್ರಂಥಾಲಯ ಅನುಷ್ಠಾನ ಮಾಡಲಾಗುತ್ತಿದೆ ''ಎಂದು ತಿಳಿಸಿದರು.

ಜಿಲ್ಲಾ ಜಾಗೃತ ಸಮಿತಿಯ ಸಂಚಾಲಕರಾದ ಮಹಾಂತಪ್ಪ ನಂದೂರ ಅವರು ಮಾತನಾಡಿ ''ಇಂದಿನ ಡಿಜಿಟಲ್ ಯುಗದಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಯುವ ಜನತೆಯಲ್ಲಿ ಬೆಳೆಸುವ,ಜಾಗೃತಿಯನ್ನು ಮೂಡಿಸುವ ಇಂಥ ಕಾರ್ಯಕ್ರಮಗಳು ಅತ್ಯವಶ್ಯಕ. ರಾಜ್ಯಾದ್ಯಂತ ಒಂದು ಲಕ್ಷ ಮನೆಗಳಿಗೆ ಈ ಯೋಜನೆ ತಲುಪಲಿದೆ ''ಎಂದು ಹೇಳಿದರು ಹೇಮಾ ಪಟ್ಟಣಶೆಟ್ಟಿ,ಕೆ. ಎಸ್ ಕೌಜಲಗಿ ,ಚೈತ್ರಾ ಹರಪನಹಳ್ಳಿ,ಮಾಂತೇಶ್ ನರೇಗಲ್, ಚಿಂತನ್ ಹತ್ತಿಕಾಳ ,ಸುರೇಶ್ ಗಾಡಿ,ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಚಂದ್ರಶೇಖರ ರೊಟ್ಟಿಗವಾಡ ನಿರೂಪಿಸಿದರು. ಶ್ರೀನಾಥ್ ಜೋಶಿ ವಂದಿಸಿದರು.

सेन्ट्रल बैंक ऑफ़ इंडिया
Central Bank of India
CENTRAL TO YOU SINCE 1911

## ಬೃಹತ್ ಇ–ಹರಾಜು ಮಾರಾಟ ಸೂಚನೆ (ಸರ್ಫೇಸಿ ಕಾಯಿದೆ 2002ರ ಅಡಿ)

ಪ್ರಾದೇಶಿಕ ಕಚೇರಿ : 14/15, ವೆರೈಟಿ ಹಾಲ್ ರಸ್ತೆ, ಕೊಯಮುತ್ತೂರು–641 001.

ಕೆಳಸಹಿದಾರರು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ಇದರ ಅಧಿಕೃತ ಅಧಿಕಾರಿಯಾಗಿ, ಈ ಕೆಳಗೆ ವಿವರಿಸಿರುವ ಆಸ್ತಿಗಳನ್ನು ಈ ಕೆಳಗೆ ವಿವರಿಸಿದ ದಿನಾಂಕದಂದು ಸೆಕ್ಷನ್ 13(4) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ರ ಅಡಿ ಸ್ವಾಧೀನಪಡಿಸಿಕೊಂಡಿದ್ದು, ಈ ಕೆಳಗಿನ ದಿನಾಂಕದ ತಗಾದೆ ಸೂಚನೆಗೆ ಸಂಬಂಧಿಸಿದಂತೆ ಸೆಕ್ಷನ್ 13(2) ರ ಹೇಳಲಾದ ಕಾಯಿದೆಯಂತೆ ಈ ಕೆಳಗಿನ ಖಾತೆಗಳಿಂದ ಸಾಲಗಾರ/ಜಾಮೀನುದಾರ/ಅಡಮಾನದಾರ ಇವರುಗಳಿಂದ ಬರಬೇಕಾದ ಬಾಕಿ ಮೊತ್ತ ಮತ್ತು ಬಡ್ಡಿಯ ವಸೂಲಿಗಾಗಿ ಮಾರಾಟಈ ಕೆಳಗೆ ವಿವರಿಸಿದಂತೆ ಮಾಡಲಿರುವರು. ಸಾಲಗಾರ/ಜಾಮಿನುದಾರ/ಅಡಮಾನದಾರ ಇವರುಗಳಿಂಧ ಹಣ ಮರುಪಾವತಿ ಅನಿಯಮಿತವಾಗಿರುವುದರಿಂದ ಕೆಳಸಹಿದಾರರು ಸೆಕ್ಷನ್ 13(4) (ಎ)ರ ಹೇಳಲಾದ ಕಾಯಿದೆಯಂತೆ ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅನ್ವಯ ಬ್ಯಾಂಕಿಗೆ ಬರಬೇಕಾದ ಬಾಕಿಯನ್ನು ಆಸ್ತಿಯ ಮಾರಾಟದ ಮೂಲಕ ವಸೂಲು ಮಾಡಿಕೊಳ್ಳಲಿರುವರು. ಮಾರಾಟವು ಕೆಳಸಹಿದಾರರ ಮೂಲಕ ಇ–ಹರಾಜು ವೇದಿಕೆಯಲ್ಲಿ ವೆಬ್‌ಸೈಟ್ https://baanknet.com ಮೂಲಕ ನಡೆಯಲಿದೆ.

ಶಾಖೆ : ಹೊಸೂರು ಶಾಖೆ. ಸಾಲದ ಖಾತೆಯ ಹೆಸರು: ಸಾಲಗಾರರು : ಮೆ॥ ಲಲಿತ್ ಶಾಂತ್ ಅಟೋ ಕಾಂಪೋನೆಂಟ್ಸ್ ಮಾಲೀಕರು: ಶ್ರೀ ಲಲಿತ ಶಾಂತೇಶ್ ಉಕ್ಕಲಿ, ನೋಂದಾಯಿತ ಮತ್ತು ಫ್ಯಾಕ್ಟರಿ ವಿಳಾಸ : ಖಾತಾ ನಂ. 1 ಮತ್ತು 2, ಸರ್ವೆ ನಂ. 650/ಬಿ, ಕೊತಗೊಂಡಪಲ್ಲಿ ಗ್ರಾಮ, ಹೊಸೂರು–635109. ಮಾಲೀಕರ ವಾಸದ ವಿಳಾಸ: ಶ್ರೀಮತಿ ಲಲಿತಾಂಬಿಕಾ ಶಾಂತೇಶ್ ಉಕ್ಕಲಿ ಆಲಿಯಾಸ್ ಶ್ರೀಮತಿ ಲಲಿತಾ ಶಾಂತೇಶ್ ಉಕ್ಕಲಿ, ಆರ್ ಹೆಚ್ ನಂ. ಎಫ್–1 ದಾಶ್‌ಮೇಶ್ ವಿಹಾರ್ ಕೊ–ಆಪರೇಟಿವ್ ಹೌಸಿಂಗ್ ಸೊಸೈಟಿ, ಶಾಹ್‌ನೂರ್ಮಿಯ ದರ್ಗಾ ಶಹಾನೂರ್‌ವಾಡಿ ಔರಂಗಾಬಾದ್ ಮಹಾರಾಷ್ಟ್ರ–431001. ಜಾಮೀನುದಾರ : ಶ್ರೀ ಶಾಂತೇಶ್ ರಾಮಚಂದ್ರ ಉಕ್ಕಲಿ, ಆರ್ ಹೆಚ್ ನಂ. ಎಫ್–1 ದಾಶ್‌ಮೇಶ್ ವಿಹಾರ್ ಕೊ–ಆಪರೇಟಿವ್ ಹೌಸಿಂಗ್ ಸೊಸೈಟಿ, ಶಾಹ್‌ನೂರ್ಮಿಯ ದರ್ಗಾ ಶಹಾನೂರ್‌ವಾಡಿ ಔರಂಗಾಬಾದ್ ಮಹಾರಾಷ್ಟ್ರ–431001. ಬಾಕಿ ಮೊತ್ತ: 11.03.2026 ರಂತೆ ರೂ.4,38,59,256.00 ಮತ್ತು ಬಡ್ಡಿ ಮತ್ತು ಇತರೆ ವೆಚ್ಚಗಳು. ತಗಾದೆ ಸೂಚನೆ ದಿನಾಂಕ : 01.10.2021, ಭೌತಿಕ ಸ್ವಾಧೀನತೆ ದಿನಾಂಕ : 16.02.2022. ಸ್ಥಿರ ಆಸ್ತಿಯ ವಿವರ: (1) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 02 ವಿಸ್ತೀರ್ಣ 2 ಗುಂಟೆ 6 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ. 3, ಪಶ್ಚಿಮಕ್ಕೆ: ಪ್ಲಾಟ್ ನಂ. 1, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ. 15. ಮೀಸಲು ಬೆಲೆ : ರೂ.71,77,000/– ಇಎಂಡಿ : ರೂ7,17,700/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

2) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 245, ವಿಸ್ತೀರ್ಣ 1 ಗುಂಟೆ 5.25 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 234, ಉತ್ತರಕ್ಕೆ: ಪ್ಲಾಟ್ ನಂ. 246, ದಕ್ಷಿಣಕ್ಕೆ: ಪ್ಲಾಟ್ ನಂ. 244. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

3) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 246, ವಿಸ್ತೀರ್ಣ 1 ಗುಂಟೆ 5.25ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿ ಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 233, ಉತ್ತರಕ್ಕೆ: ಪ್ಲಾಟ್ ನಂ. 247, ದಕ್ಷಿಣಕ್ಕೆ: ಪ್ಲಾಟ್ ನಂ. 245.. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

4) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 252, ವಿಸ್ತೀರ್ಣ 1 ಗುಂಟೆ 5.25 ಆಣಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 227, ಉತ್ತರಕ್ಕೆ: ಪ್ಲಾಟ್ ನಂ. 253, ದಕ್ಷಿಣಕ್ಕೆ: ಪ್ಲಾಟ್ ನಂ. 251. ಮೀಸಲು ಬೆಲೆ : ರೂ.40,13,500/– ಇಎಂಡಿ : ರೂ.4,01,350/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/.

5) ಆರ್ ಎಸ್ ನಂ. 71/ಎ +72ಎ, ಕೃಷಿಯೇತರ ವಾಸಯೋಗ್ಯ ಪ್ಲಾಟ್ ನಂ. 253, ವಿಸ್ತೀರ್ಣ 1 ಗುಂಟೆ 12.5 ಆನಾಗಳು, ಅಟ್ಟಿಕೋಲ ಗ್ರಾಮ, ಹನುಮಂತ ನಗರದ ಹತ್ತಿರ ಅಟ್ಟಿಕೋಲ ಧಾರವಾಡ ತಾಲೂಕು ಮತ್ತು ಜಿಲ್ಲೆ, ಹೆಚ್‌ಡಿಎಂಸಿ ವ್ಯಾಪ್ತಿಗೆ ಒಳಪಟ್ಟಿದ್ದು ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ. 226, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಪ್ಲಾಟ್ ನಂ. 252. ಮೀಸಲು ಬೆಲೆ : ರೂ.53,82,500/– ಇಎಂಡಿ : ರೂ.5,38,250/– ಬಿಡ್ ಹೆಚ್ಚಳ ಮೌಲ್ಯ : ರೂ.1,00,000/–

ಹರಾಜಿನ ದಿನಾಂಕ : 17.06.2026, ಹರಾಜಿನ ಸಮಯ: ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆ. ಜೊತೆಗೆ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ. ಆಸ್ತಿ ಪರಿವೀಕ್ಷಣೆ ದಿನಾಂಕ: 11.06,2026ರಿಂದ 15.06.2026ರ ನಡುವೆ ಬೆಳಿಗ್ಗೆ 10.00 ರಿಂದ 04.00ರ ನಡುವೆ ಎಲ್ಲಾ ಕೆಲಸದ ದಿನದಂದು ಶಾಖಾ ವ್ಯವಸ್ಥಾಪಕರ ಪೂರ್ವಾನುಮತಿ ಪಡೆದು. ಇಎಂಡಿ ಪಾವತಿಗೆ ಕೊನೆ ದಿನಾಂಕ : 17.06.2026 ಮಧ್ಯಾಹ್ನ 1.00 ಗಂಟೆಯವರೆಗೆ. ಅಧಿಕೃತ ಅಧಿಕಾರಿ ಮೊಬೈಲ್ ಸಂ. 8489903009/ಮುಖ್ಯ ವ್ಯವಸ್ಥಾಪಕರು (ಆರ್‌ಒ), ಮೊಬೈಲ್ ಸಂ. 8489903057.

ನಿಯಮ ಮತ್ತು ನಿಬಂಧನೆಗಳು : 1. ಹರಾಜು ಆನ್‌ಲೈನ್ ಬಿಡ್ಡಿಂಗ್ ಮೂಲಕ ವೆಬ್‌ಸೈಟ್ https://baanknet.com ಯಲ್ಲಿ ಈ ಮೇಲೆ ತಿಳಿಸಿರುವ ಸಮಯ ಮತ್ತು ದಿನಾಂಕದಿಂದ (ಮಾರಾಟ ಮುಗಿಯುವವೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ) ನಡೆಯಲಿದೆ. 2. ಬಿಡ್ ಗಳನ್ನು ಆನ್‌ಲೈನ್ ಮೂಲಕ 17.06.2026ರಂದು ಮಧ್ಯಾಹ್ನ 1.00ಗಂಟೆಯವರೆಗೆ ಸಲ್ಲಿಸಬಹುದು. 3, ಇ–ಹರಾಜು ಮಾರಾಟವು "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ". "ಯಾವುದು ಇದೆಯೋ ಹಾಗೆ" ಆಧಾರದ ಮೇಲೆ ಮಾರಾಟ ನಡೆಸಲಾಗುವುದು. 4. ಉದ್ದೇಶಿತ ಬಿಡ್ಡುದಾರರು ವೆಬ್ ಸೈಟ್ https://baanknet.comಗೆ ಬೇಟಿ ನಿಡಿ ಬಿಡ್ ಸಲ್ಲಿಸುವ ಮೊದಲು ನಿಯಮ ಮತ್ತು ನಿಬಂಧನೆಗಳನ್ನು ಪರಿಶೀಲಿಸಿ ಆನಂತರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. 5. ಯಶಸ್ವಿ ಬಿಡ್ಡುದಾರರು ಆಸ್ತಿಯ ಮೌಲ್ಯ ರೂ.50.00 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದರೆ, ಶೇ 1 ನ್ನು ಮಾರಾಟ ಮೌಲ್ಯವಾಗಿ ಟಿಡಿಎಸ್ ಪಾವತಿ ಮಾಡಬೇಕು.ಆದಾಯ ತೆರಿಗೆ ಇಲಾಖೆ ಕಾಯಿದೆ 1941ಎ ರ ಅನ್ವಯ ನಮೂನೆ 26 ಕ್ಯುಬಿ ರ ಆದಾಯ ತೆರಿಗೆ ಇಲಾಖೆ ಕಾಯಿದೆಯ ಚಲನ್ ಮತ್ತು ಮೂಲ ರಸೀದಿಯನ್ನು ಟಿಡಿಎಸ್ ಪ್ರಮಾಣಪತ್ರವನ್ನು ಬ್ಯಾಂಕ್ ಗೆ ಸಲ್ಲಿಸಬೇಕು. ಆಸ್ತಿ ಸಂಬಂಧಿತ ವಿಚಾರಣೆಗಾಗಿ ಸಂಪರ್ಕಿಸಿ: ಅಧಿಕೃತ ಅಧಿಕಾರಿ: ಮೊಬೈಲ್ ಸಂ. 8489903009/ಮುಖ್ಯ ವ್ಯವಸ್ಥಾಪಕರು (ಆರ್ ಒ)–ಮೊಬೈಲ್ ಸಂಖ್ಯೆ: 8489903057, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ಪ್ರಾದೇಶಿಕ ಕಚೇರಿ, ಕೊಯಮುತ್ತೂರು ಇ–ಮೇಲ್ : bmcoim2071@centralbank.co.in/recvcoimro@centralbank.co.in ಇವರನ್ನು ಕೆಲಸದ ದಿನದಂದು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮತ್ತು ವೆಬ್ ಪೋರ್ಟಲ್ ನಲ್ಲಿ ಬಿಡ್‌ದಾರರು ನೊಂದಾಯಿಸಿದ ನಂತರ ಉದ್ದೇಶಿತ ಬಿಡ್ಡುದಾರರು ಈ ಕೆಳಗಿನ ದಾಖಲೆಗಳನ್ನು ಬಿಡ್ ಸಲ್ಲಿಕೆಯ ಕೊನೆ ದಿನಾಂಕದ ಮೊದಲು ಸಲ್ಲಿಸಬೇಕು. 1) ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಚಲನ್, 2. ಪ್ಯಾನ್ ಕಾರ್ಡ್ ಪ್ರತಿ, 3. ಗುರುತಿನ ಚೀಟಿ ಅಂದರೆ ಸ್ವಯಂ ದೃಢೀಕೃತ ವೋಟರ್ ಐಡಿ / ಚಾಲನಾ ಪರವಾನಿಗೆ/ಪಾಸ್‌ಪೋರ್ಟ್ ಇತ್ಯಾದಿ ಪ್ರತಿ. 4. ವಿಳಾಸ ಪುರಾವೆ ಪ್ರತಿ ಇವುಗಳನ್ನು ಲಗತ್ತಿಸಬೇಕು ಇವುಗಳು ಇಲ್ಲವಾದರೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು

ಸ್ಥಳ: ಹೊಸೂರು
ದಿನಾಂಕ: 29.05.2026

ಅಧಿಕೃತ ಅಧಿಕಾರಿ
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ